
**ಇದು ಐತಿಹಾಸಿಕ ಹೌದು**
**ಹುಟ್ಟು, ಇರುವಿಕೆ, ಸಾವು**
**ಮೀರಿದ ವರತ್ರಯಧಾರಿ—ಬೀಜ—28**

ಇಷ್ಟಕ್ಕೂ ಬೇಂದ್ರೆ ಅಂಬಿಕಾತನಯದತ್ತರಾದದ್ದು ಹೇಗೆ? ತಾವು ಇಟ್ಟುಕೊಂಡ ಇನ್ನೊಂದು ನಾಮದ ಬಲದಿಂದಲೇ ಅಲ್ಲವೆ? ಇಂಗ್ಲಿಷಿನಲ್ಲಿ 'ಸ್ಯೂಡೋನಿಮ್' ಅಥವಾ 'ನಾಮ್ ಡಿ ಪ್ಲೂಮ್' ಎಂದರೆ ಗುಪ್ತನಾಮ ಅಥವಾ ಕಾವ್ಯನಾಮ ಎಂದರ್ಥ. ಸಾಹಿತ್ಯಲೋಕದಲ್ಲಿ ಸ್ವಂತ ಹೆಸರನ್ನು ಬಿಟ್ಟು ಬೇರೊಂದು ಹೆಸರನ್ನು ಆರೋಪಿಸಿಕೊಂಡು ಬರೆದ ಲೇಖಕರ ಒಂದು ಪರಂಪರೆಯೇ ಇದೆ. ವಾಲ್ಟೇರ್ (ಫ್ರಾನ್ಸ್ವಾ—ಮಾರೀ ಅರೂ), ನೊವಾಲಿಸ್(ಫ್ರೈಡ್ರಿಖ್ ವಾನ್ ಹಾರ್ಡೆನ್‌ಬರ್ಗ್), ಜಾರ್ಜ್ ಸ್ಯಾಂಡ್ (ಅಮಾಂಡಿನ್ ಅರೋರ್ ಡ್ಯೂಪಿನ್), ಸ್ತೆಂದಾಲ್ (ಮಾರಿ ಹೆನ್ರಿ ಬೇಯ್ಲ್), ಶಾರ್ಲಟ್ ಬ್ರಾಂಟೆ (ಕರರ್ ಬೆಲ್), ಜಾರ್ಜ್ ಎಲಿಯಟ್ (ಮಾರಿ ಆನ್ ಇವಾನ್ಸ್), ಮಾರ್ಕ್ ಟ್ವೇನ್ (ಸ್ಯಾಮ್ಯುಯೆಲ್ ಕ್ಲೆಮೆನ್ಸ್), ಓ ಹೆನ್ರಿ (ವಿಲಿಯಂ ಸಿಡ್ನಿ ಪೋರ್ಟರ್), ಸಾಕಿ (ಎಚ್.ಎಚ್. ಮನ್ರೊ)...



ದ.ರಾ. ಬೇಂದ್ರೆ

ಬ್ರಯನ್ ಓ'ನೋಲಾನ್ ಐರ್ಲೆಂಡಿನ ಪ್ರಖ್ಯಾತ ಲೇಖಕ. ಅವನು 'ಮೈಲ್ಸ್ ನಾ ಗೊಪಾಲೀನ್' ಎಂಬ ಹೆಸರಿನಲ್ಲಿ 'ಐರಿಷ್ ಟೈಮ್ಸ್' ಪತ್ರಿಕೆಗಾಗಿ ಅಂಕಣಗಳನ್ನೂ, 'ಫ್ಲಾನ್ ಓ'ಬ್ರಯನ್' ಎಂಬ ಹೆಸರಿನಲ್ಲಿ ಕಾದಂಬರಿಗಳನ್ನೂ ಬರೆದವನು. ಅವನ 'ಅಟ್ ಸ್ವಿಮ್—ಟೂ—ಬರ್ಡ್ಸ್' ಕಾದಂಬರಿಯೊಳಗೊಂದು ಕಾದಂಬರಿಯೊಳಗೊಂದು ಕಾದಂಬರಿಯಿರುವ ಒಂದು ಅತ್ಯದ್ಭುತ ಕೃತಿ.

ಎರಡನೇ ಮಹಾಯುದ್ಧದ ನಂತರ ಬ್ರಿಟನ್ನಿನಲ್ಲಿ ಡಬ್ಲ್ಯು.ಎಚ್. ಆಡೆನ್ ಗುಂಪಿನ ಕವಿಗಳೆಂದು ಹೆಸರಾಗಿದ್ದವರು ಮೂವರು: ಸ್ಟೀಫನ್ ಸ್ಪೆಂಡರ್, ಲೂಯಿ ಮೆಕ್‌ನೀಸ್ ಮತ್ತು ಸಿಸಿಲ್ ಡೇ ಲೀವಿಸ್. ಇವರಲ್ಲಿ ಕೊನೆಯವನು 'ನಿಕೊಲಾಸ್ ಬ್ಲೇಕ್' ಎಂಬ ಹೆಸರಿನಲ್ಲಿ ಬರೆದಿರುವ ಕೆಲವು ಪತ್ತೇದಾರಿ ಕಾದಂಬರಿಗಳನ್ನು ನಾನು ಓದಿದ್ದೇನೆ. ಅರ್ಜೆಂಟೀನಾದ ಮಹಾ ಲೇಖಕ ಹೋರ್ಹೆ ಲೂಯಿಸ್ ಬೋರ್ಹೆಸ್ ಕಾವ್ಯನಾಮವನ್ನೇನೂ ಇಟ್ಟುಕೊಳ್ಳಲಿಲ್ಲ. ಆದರೂ ಅವನ ಕವಿತೆ, ಕತೆಗಳಲ್ಲಿ ಮತ್ತೊಬ್ಬ ಬೋರ್ಹೆಸ್‌ನ ಪ್ರಸ್ತಾಪವಾಗುತ್ತಿರುತ್ತದೆ. 'ಇನ್ನೊಬ್ಬ' ಎಂಬ ಕತೆಯಲ್ಲಿ ಅವನು ತನ್ನದೇ ತಾರುಣ್ಯರೂಪಿಯೊಬ್ಬನನ್ನು ಕೇಂಬ್ರಿಡ್ಜಿನಲ್ಲಿ ಭೇಟಿಯಾಗುತ್ತಾನೆ. ಅವನು ನಾನು ಕಂಡ ಕನಸೆ, ನಾನು ಅವನು ಕಂಡ ಕನಸೆ ಎಂದು ಇಬ್ಬರಿಗೂ ಆಶ್ಚರ್ಯ. ಕಡೆಗೆ ಹಿರಿಯ ಬೋರ್ಹೆಸ್ ತಾನು ಅವನಂತೆಯೇ ಕಂಡರೂ ಅವನಲ್ಲ; ಯಾಕೆಂದರೆ ವಯಸ್ಸು ಮತ್ತು ಅನುಭವ ನನ್ನನ್ನು ಪರಿವರ್ತಿಸಿವೆ ಎಂದು ಕಂಡುಕೊಳ್ಳುತ್ತಾನೆ.